ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರು ಚಂದ್ರಾ ಬಡಾವಣೆ ಉಪ-ವಿಭಾಗ, ಪಶ್ಚಿಮ, 2ನೇ ಮಹಡಿ

4ನೇ ಬಿ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಎಂ.ಸಿ. ಬಡಾವಣೆ, ಬೆಂಗಳೂರು- 560040.

---

ಸಂಖ್ಯೆ :- ವಾ-127/ವಾ.ಸ/ಸಭಾನಡವಳಿ/04/2020-21 ದಿನಾಂಕ : 07-12-2020

## -: ಸಭೆಯ ನಡವಳಿಗಳು :-

ದಿನಾಂಕ. 07-12-2020 ಶನಿವಾರದಂದು ಪೂರ್ವಾಹ್ನ 10-00 ಘಂಟೆಗೆ ವಾರ್ಡ್ - 127 ಮೂಡಲಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀ ಎನ್. ಆನಂದ್, ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ - 127 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದುಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಹಾಗೂ ಕೋವಿಡ್- 19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಪ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡೆಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ, ಸಭೆಯನ್ನು ಮುನ್ನಡೆಸಲಾಯಿತು.

ಸಭೆಗೆ ಹಾಜರಿದ್ದವರು

| | |
|---|---|
| 1 | ಶ್ರೀ ಎನ್. ಆನಂದ್ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)<br>ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ -127 |
| 2 | ಶ್ರೀ ತಿಮ್ಮಪ್ಪ ಹೆಚ್.ಎಂ ಸಹಾಯಕ ಅಭಿಯಂತರರು<br>ಕಾರ್ಯದರ್ಶಿ ಮತ್ತು ಸಂಚಾಲಕರು |
| 3 | ಶ್ರೀ ರಮ್ಯ ಕೆ.ಎಸ್ ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ ಪ್ರವೀಣ್‌ರಾಜ್ .ಜಿ ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ ಜಯರಾಮಯ್ಯ .ಸಿ ಕೆಲಸ ಪರಿವೀಕ್ಷಕರು |
| 6 | ಶ್ರೀ ದೇವರಾಜು ಸೂಪರ್‌ವೈಸರ್ |
| 7 | ಶ್ರೀ ಶಂಕರ್ ಸೂಪರ್‌ವೈಸರ್ |
| 8 | ಶ್ರೀ ಮಂಜು ಸ್ಟ್ರೀಟ್ ಲೈಟ್ |
| 9 | ಶ್ರೀ ಕೆ.ಎಸ್ ಪರಮೇಶ್ ವಾರ್ಡ್ ಪ್ರೆಸಿಡೆಂಟ್ |
| 10 | ಶ್ರೀ ಪ್ರಾಣೇಶ್ ಮಾರ್ಷಲ್ |
| 11 | ಶ್ರೀ ಪ್ರಕಾಶ್ .ಎಂ ಸಾರ್ವಜನಿಕರು |
| 12 | ಶ್ರೀ ಮನೋಜ್‌ಕುಮಾರ್ .ಎಸ್ ಸಾರ್ವಜನಿಕರು |
| 13 | ಶ್ರೀ ಮಂಜುನಾಥ ಸಾರ್ವಜನಿಕರು |
| 14 | ಶ್ರೀ ನವೀನ್ .ಕೆ ಸಾರ್ವಜನಿಕರು |
| 15 | ಶ್ರೀ ಪ್ರಕಾಶ್ .ಜಿ ಸಾರ್ವಜನಿಕರು |

Scanned with Cam

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ

ಮಾನ್ಯ ಸಹಾಯಕ್ಕರಾದ ನೋಡಲ್ ಅಧಿಕಾರಿಯವರು ಕೋವಿಡ್- 19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ಸಭೆಯಲ್ಲಿ ಕೋವಿಡ್- 19 ಸಾಂಕ್ರಾಮಿಕ ರೋಗವು ವಾರ್ಡ್‌ನಲ್ಲಿ ದಿನಾಂಕ. 07-12-2020 ರವರೆಗೆ ಒಟ್ಟು 1161 ಕೇಸ್‌ಗಳು ದಾಖಲಾಗಿದ್ದು, ಇವರಲ್ಲಿ 42 ಜನ ಸೋಂಕಿತರಿದ್ದು, 44 ಜನ ಮರಣ ಹೊಂದಿರುತ್ತಾರೆ ಹಾಗೂ 1075 ಜನರು ಗುಣಮುಖರಾಗಿರುತ್ತಾರೆ.

  ಕೋವಿಡ್- 19 ಸಾಂಕ್ರಾಮಿಕ ರೋಗವು ಉಲ್ಬಣಗೊಳ್ಳುವುದು ವೈದ್ಯಕೀಯ ಸಮೀಕ್ಷೆಯ ಪ್ರಕಾರ ಕಡಿಮೆಯಾಗಿರುವುದರಿಂದ ಆಂಬ್ಯುಲೆನ್ಸ್ ವಾಹನವನ್ನು ಹಾಗೂ ಸಿಬ್ಬಂದಿಯನ್ನು ಸ್ಥಗಿತಗೊಳಿಸಿರುವುದನ್ನು ಸಭೆಯಲ್ಲಿ ಚರ್ಚಿಸಲಾಯಿತು.

2) ಅಭಿಯಂತರರ ವಿಭಾಗದ ಬಗ್ಗೆ

ಮಾನ್ಯ ಸಹಾಯಕ್ಕರಾದ ನೋಡಲ್ ಅಧಿಕಾರಿಯವರು ವಾರ್ಡ್ – 127 ಅಭಿಯಂತರ ವಿಭಾಗದ ಬಗ್ಗೆ ಮಾತನಾಡುತ್ತಾ ಈ ಕೆಳಕಂಡಂತೆ ಸಭೆಯಲ್ಲಿ ತಿಳಿಸಿದರು.

- ರಸ್ತೆಗುಂಡಿಗಳನ್ನು ಮುಚ್ಚಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.
- ಸಹಾಯ 2.0 ಅಪ್ಲಿಕೇಷನ್‌ನಲ್ಲಿ ದಾಖಲಾಗುತ್ತಿರುವ ದೂರುಗಳಿಗೆ ಶೀಘ್ರವಾಗಿ ಸೂಕ್ತ ಕ್ರಮವಹಿಸಬೇಕಾಗಿ ತಿಳಿಸಿದರು.
- ವಾರ್ಡ್‌ನಲ್ಲಿ ಓಎಫ್‌ಸಿ ಕೇಬಲ್‌ಗಳು ಹಾಳಾಗಿರುವ ದೂರು ಸಹಾಯಕ 2.0 ದಾಖಲಾಗಿದ್ದು, ಅದರ ಬಗ್ಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ನಂತರ ಮುಖ್ಯ ಅಭಿಯಂತರರು ಓಎಫ್‌ಸಿ ಸೆಲ್ ರವರಿಗೆ ಮೊಬೈಲ್ ಮೂಲಕ ಸಂಪರ್ಕಿಸಿ ಸಮಸ್ಯೆಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ವಿಚಾರಿಸಿದರು.

  ಸಹಾಯಕ ಅಭಿಯಂತರರು ಮಾತನಾಡುತ್ತಾ,
- ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿ ಕಂಡುಬಂದಿರುವಂತಹ ರಸ್ತೆಗುಂಡಿಗಳನ್ನು ಮುಚ್ಚಲಾಗಿದ್ದು, ಇತ್ತೀಚೆಗೆ ಕಂಡುಬಂದಂತಹ ಗುಂಡಿಗಳು ಮಾತ್ರ ಬಾಕಿಯಿರುತ್ತದೆ ವಾರ್ಡ್ ವ್ಯಾಪ್ತಿಯಲ್ಲಿ ಪರಿಶೀಲಿಸಿ ಸಾರ್ವಜನಿಕರ ಅಹವಾಲನ್ನು ಪರಿಶೀಲಿಸಲಾಗಿ ಅಲ್ಲಲ್ಲಿ ಇರುವ ಡೆಬ್ರಿಸ್‌ನ್ನು ಕೂಡಲೇ ತೆರವುಗೊಳಿಸಲು ವಾರ್ಡ್ ಇಂಜಿನಿಯರ್‌ಗೆ ತಿಳಿಸಲಾಯಿತು ಸಿಲ್ಟ್ & ಟ್ರ್ಯಾಕ್ಟರ್ ವತಿಯಿಂದ ನಿರ್ವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು.

3) ವಿದ್ಯುತ್ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿ ಸಾರ್ವಜನಿಕ ಸ್ಥಳಗಳಾದ ರಸ್ತೆ ಬೀದಿ ದೀಪ ಮತ್ತು ಪಾರ್ಕ್‌ಗಳಲ್ಲಿ ವಿದ್ಯುತ್ ನಿರ್ವಹಣೆಯಾಗುತ್ತಿದೆ ಪಂಚಶೀಲನಗರ ಬಿಡಿಎ ಅಪಾರ್ಟ್‌ಮೆಂಟ್ ಮತ್ತು 6ನೇ ಅಡ್ಡರಸ್ತೆಯಲ್ಲಿ ಹೈ ಮಾಸ್ಟ್‌ಲೈಟ್ ನಿರ್ವಹಣೆ ಮಾಡಲು ಸಭೆಯಲ್ಲಿ ಅಧಿಕಾರಿಗಳಿಗೆ ಸೂಚಿಸಲಾಯಿತು.

4) ಪಶುಪಾಲನೆ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿ ನಾಯಿಗಳ ಹಾವಳಿ ಜಾಸ್ತಿಯಿದ್ದು, ನಾಯಿಕಾಟ ತಪ್ಪಿಸಲು ಹಾಗೂ ಹುಚ್ಚುನಾಯಿಗಳ ಬಗ್ಗೆ ಸಾರ್ವಜನಿಕರು ದೂರನ್ನು ಸಲ್ಲಿಸಿದ್ದರ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು

5) ತೋಟಗಾರಿಕೆ ವಿಭಾಗದ ಬಗ್ಗೆ :-

- ವಾರ್ಡ್‌ನಲ್ಲಿನ ಉದ್ಯಾನವನಗಳ ಪಟ್ಟಿ ಮತ್ತು ಉದ್ಯಾನವನಗಳ ನಿರ್ವಹಣೆ ಮಾಡುತ್ತಿರುವ ಬಗೆಗಿನ ಮಾಹಿತಿಗಳನ್ನು ಸಭೆಗೆ ವರದಿ ಮಾಡಲು ತಿಳಿಸಿರುವುದನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.

6) ಅರಣ್ಯ ವಿಭಾಗದ ಬಗ್ಗೆ:-

ವಾರ್ಡ್‌ನಲ್ಲಿ ಮಳೆಯಿಂದಾಗಿ ಬಿದ್ದಿರುವ ಮರಗಳನ್ನು ಕತ್ತರಿಸಿ ತೆರವುಗೊಳಿಸದೇ ಹಾಗೇ ಬಿಟ್ಟಿರುತ್ತಾರೆ ಇದರಿಂದಾಗಿ ಸಾರ್ವಜನಿಕರು ದೂರು ನೀಡಿರುತ್ತಾರೆ ಆದ್ದರಿಂದ ರೆಂಬೆಗಳನ್ನು ಕತ್ತರಿಸಿ ಅವುಗಳನ್ನು ಅರಣ್ಯ ವಿಭಾಗದವರೇ ತೆರವುಗೊಳಿಸಬೇಕೆಂದು ಸಭೆಯಲ್ಲಿ ಚರ್ಚಿಸಿರುವುದನ್ನು ಕ್ರಮ ವಹಿಸಲು ಸೂಚಿಸಲಾಯಿತು.

7) ಘನತ್ಯಾಜ್ಯ ವಿಭಾಗದ ಬಗ್ಗೆ :-

ಹಸಿ ಮತ್ತು ಒಣಕಸ ನಿರ್ವಹಣೆಗೆ ಒತ್ತು ನೀಡಲು ಸಭೆಯಲ್ಲಿ ಸೂಚಿಸಲಾಯಿತು ಕಸ ತೆರವುಗೊಳಿಸುವ ಸ್ಥಳದಲ್ಲಿ ಡೆಬ್ರಿಸ್‌ನ್ನು ತೆರವುಗೊಳಿಸಲು ಸೂಚಿಸಲಾಯಿತು.

8) ಬಿಡಬ್ಲ್ಯೂಎಸ್ಎಸ್‌ಬಿ ವಿಭಾಗದ ಬಗ್ಗೆ:-

ಸಾರ್ವಜನಿಕರಿಗೆ ತೊಂದರೆಯಾಗದಂತೆ, ಮ್ಯಾನ್ ಹೋಲ್ ಸುತ್ತ ಗುಂಡಿ ಬಿದ್ದಿರುವ ಜಾಗಗಳನ್ನು ಕಾಂಕ್ರೀಟ್‌ನಿಂದ ತುಂಬಿಸಿ, ಡೆಬ್ರಿಸ್‌ನ್ನು ತೆರವುಗೊಳಿಸಲು ಸಭೆಯಲ್ಲಿ ಸೂಚಿಸಲಾಯಿತು. ಈ ಬಗ್ಗೆ ಅಭಿಯಂತರರು ಒಪ್ಪಿಗೆ ಸೂಚಿಸಿರುತ್ತಾರೆ. ಶಕ್ತಿಗಾರ್ಡನ್ 3ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್‌ನ್ನು ಸರಿಪಡಿಸಲು ಸೂಚಿಸಲಾಯಿತು. ಕೊರೆದಿರುವ ಬೋರ್‌ವೆಲ್‌ಗಳನ್ನು ಬಿಡಬ್ಲ್ಯೂಎಸ್ಎಸ್‌ಬಿ ವತಿಯಿಂದ ನಿರ್ವಹಿಸಲು ಸಭೆಯಲ್ಲಿ ಸೂಚಿಸಲಾಯಿತು.

9) ಬೆಸ್ಕಾಂ ವಿಭಾಗದ ಬಗ್ಗೆ:-

ಬೆಸ್ಕಾಂ ಅಭಿಯಂತರ ಅನುಪಸ್ಥಿತಿಯಲ್ಲಿ ಗಿಡಗಳನ್ನು ಕತ್ತರಿಸಿದ ರೆಂಬೆಗಳನ್ನು ಅಲ್ಲಲ್ಲಿ ಹಾಗೇ ಬಿಟ್ಟಿರುವುದು ಕಂಡುಬಂದಿರುತ್ತದೆ ಇದನ್ನು ತೆರವುಗೊಳಿಸಲು ಸೂಕ್ತ ಕ್ರಮವಹಿಸಲು ಅಭಿಯಂತರರಿಗೆ ಸೂಚನೆ ನೀಡಲಾಯಿತು ಹಾಗೂ ಯುಜಿ ಕೇಬಲ್‌ಗೆ ಅಗೆದಿರುವ ಜಾಗದಲ್ಲಿ ರಸ್ತೆಯನ್ನು ರೆಸ್ಟೋರೇಷನ್ ಕ್ರಮ ವಹಿಸಲು ಸೂಚಿಸಲಾಯಿತು.

10) ಪೊಲೀಸ್ ವಿಭಾಗದ ಬಗ್ಗೆ:-

ಟ್ರಾಫಿಕ್ ವಿಭಾಗದಿಂದ ಕೈಲಾಸಗಿರಿ ಪಾರ್ಕ್ ಹತ್ತಿರ ಅನಧಿಕೃತವಾಗಿ ಪಾರ್ಕಿಂಗ್ ನಿಲ್ಲಿಸಿರುವುದನ್ನು ಸಾರ್ವಜನಿಕರು ದೂರು ಸಲ್ಲಿಸಿರುತ್ತಾರೆ. ಬಿಡಿಎ ಅಪಾರ್ಟ್‌ಮೆಂಟ್ ಹತ್ತಿರ 3ನೇ ಮುಖ್ಯರಸ್ತೆ, ನಾಗರಭಾವಿ ಮೈನ್‌ರೋಡ್, ಟೆಂಟ್‌ರಸ್ತೆ, ಜ್ಞಾನಸೌಧ ಹತ್ತಿರ, ಲಾ & ಆರ್ಡರ್ ಮಾಡಿ ಗಾಂಜಾ ಹೊಡೆಯುವವರು ಬೈಕ್ ವೀಲಿಂಗ್ ಮಾಡುವವರು ಮತ್ತು ನೋ ಪಾರ್ಕಿಂಗ್ ಏರಿಯಾಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಯಿತು. 3ನೇ ಮುಖ್ಯರಸ್ತೆ, ಕೈಲಾಸಗಿರಿ ದೇವಸ್ಥಾನ ಬಂಡೆ ಗಣಪತಿ ದೇವಸ್ಥಾನ, ಎಸ್‌ವಿಜಿ ನಗರ, ಎಸ್‌ಡಬ್ಲ್ಯೂಡಿ ಬ್ರಿಡ್ಜ್ ಹತ್ತಿರ, ಬಿಡಿಎ ಅಪಾರ್ಟ್‌ಮೆಂಟ್ ಹತ್ತಿರ ಪೊಲೀಸ್ ಚೌಕಿ ಹಾಕಲು ಸಾರ್ವಜನಿಕರ ಕೋರಿಕೆಯ ಮೇರೆಗೆ ಸೂಚಿಸಲಾಯಿತು.

11) ಸಮಾಜ ಕಲ್ಯಾಣ ಇಲಾಖೆ ಬಗ್ಗೆ:-

- ಈ ಹಿಂದೆ ಬಜೆಟ್‌ನಲ್ಲಿ ಲಭ್ಯವಿರುವ ಹಿಂದಿನ ಪಾಲಿಕೆ ಸದಸ್ಯರ ಅವಧಿಯಲ್ಲಿ ಸಲ್ಲಿಸಲಾಗಿರುವ ವೈದ್ಯಕೀಯ ಬಿಲ್ಲುಗಳನ್ನು ಪಾವತಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಈ ಬಗ್ಗೆ ಕ್ರಮ ವಹಿಸಲು ಸಭೆಯಲ್ಲಿ ಚರ್ಚಿಸಿರುತ್ತಾರೆ.

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಸರಿಪಡಿಸುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಾರ್ಡ್ ಕಮಿಟಿ ವಾರ್ಡ್ – 127 ವಾಟ್ಸ್‌ಅಪ್ ಗ್ರೂಪ್ ನಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಹಾಯಕ ಅಭಿಯಂತರರು ವಾರ್ಡ್ 127 ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 127

Anand

ಅಧ್ಯಕ್ಷರು,
ಹಾಗೂ ಕಾರ್ಯಪಾಲಕ ಅಭಿಯಂತರರು
ನೋಡೆಲ್ ಅಧಿಕಾರಿಗಳು

Scanned with Cam